**ಕಥೆ**

# ಹೊಲಸಿ



**ಡಾ.ಸೌಮ್ಯ ಕೆ.ವಿ.**

ಕಲೆ: ಎಸ್.ವಿ. ಹೂಗಾರ್

ತೋಟ, ಮನೆ ನೋಡಿಕೊಂಡು ಹಳ್ಳಿಯಲ್ಲಿ ಉಳಿದಿರುವ ಯುವಕರಿಗೆ ಹೆಣ್ಣು ಕೊಡದಿರುವ ಈ ಕಾಲದಲ್ಲಿ ಮಹೇಶ ಇಂಥದ್ದೊಂದು ಉಪಾಯ ಮಾಡಿದ್ದಿರಬಹುದು ಎಂದು ಯಾರಿಗೆ ಹೊಳೆಯಲು ಸಾಧ್ಯ? ಬಾಯಿತೊಡು ಹತ್ತಿ ಚೀರುತ್ತಿದ್ದ ಬಾಲೆಯನ್ನು ಸಮಾಧಾನ ಪಡಿಸುವ ಗೋಜಿಗೂ ಹೋಗದೇ ಕಿಟಕಿಯ ಸರಳಿಗೆ ಗಲ್ಲವೊತ್ತಿ ಚಿಂತಿಸುತ್ತಿದ್ದಳು ಭಾಗ್ಯಶ್ರೀ. ಅವಳು ಕಟ್ಟಿದ್ದ ಸುಂದರ ಕನಸಿನ ಮಹಲು ಕಣ್ಣೀರ ಕಡಲಲ್ಲಿ ಮುಳುಗುತ್ತಿರುವಂತೆ ಎದೆ ಭಾರವಾಯಿತು.

ಬೆಂಗಳೂರಲ್ಲಿ ಕಂಪನಿಯಲ್ಲಿ ಕೆಲಸ, ವಾಸಕ್ಕೊಂದು ಸ್ವಂತ ಫ್ಲಾಟು ಇದ್ದ ಮಹೇಶನೊಂದಿಗೆ ಮದುವೆಯಾದ ಹೊಸದರಲ್ಲಿ ಭಾಗ್ಯಶ್ರೀಯನ್ನು ಹಿಡಿಯುವವರೇ ಇರಲಿಲ್ಲ. ದಿನಾ ಸಂಜೆ ವಾಕಿಂಗು ಹೋಗಿ ಪಾನಿಪುರಿಯನ್ನೋ, ಗೋಬಿಯನ್ನೋ, ಮತ್ತೆಂಥದ್ದೋ ಬಾಯಿರುಚಿಗೆ ವಣಕಣವನ್ನು ಮೆದ್ದು ಮನೆಗೆ ಬಂದು ಮಜ್ಜಿಗೆ ಅನ್ನ ಉಂಡರೆ ಉಂಡರು... ಇಲ್ಲವಾದ್ರೆ ಹಣ್ಣು ತಿಂದರೂ ಆಯ್ತು. ಮತ್ತೆ ಬೆಳಗ್ಗೆ ಹೊರಟರೆ ಮಹೇಶ ವಾಪಸು ಬರುವುದು ಸಂಜೆಗೇ.. ಒಂದು ಸಣ್ಣ ಅಡುಗೆಯ ಶಾಸ್ತ್ರ ಮಾಡಿ, ಕೆಲಸದವಳಿಗೆ ಸ್ವಚ್ಛ ಮಾಡುವ ಚಾರ್ಜು ದಾಟಿಸಿ ಸೋಫಾ ಮೇಲೆ ಉರುಳಿದರೆ ಮತ್ತೆ ರೀಲ್ಸು ನೋಡುವುದೇ ಕೆಲಸ..

ಈಗ ಬಾಣಂತನ ಮುಗಿಸಿ ಹೋದ ಮೇಲೆ ಪಾಪು ತುಸು ದೊಡ್ಡದಾದ ಕೂಡಲೇ ಏನಾದ್ರೂ ಕಂಪ್ಯೂಟರ್ ಕೋರ್ಸು ಮಾಡಿ ಕೆಲಸ ಸೇರುವ ಹುಕಿಯಲ್ಲಿದ್ದವಳಿಗೆ ಗಂಡ ಕೆಲಸಕ್ಕೆ ರಾಜೀನಾಮೆ ಕೊಟ್ಟು ಬೆಂಗಳೂರಿನ ಫ್ಲಾಟು ಮಾರಿ ಹಳ್ಳಿಮನೆಯಲ್ಲೇ ಸೆಟಲ್ ಆಗುವ ವಿಚಾರ ಹೇಳಿದಾಗ ಅರಬೈಲು ಗುಡ್ಡವೇ ನೆತ್ತಿಯ ಮೇಲೆ ಕುಸಿದುಬಿದ್ದ ಹಾಗಾಯ್ತು!

ಅಸಲಿಗೆ ನಡೆದ ಹಿಕಮತ್ತು ಭಾಗ್ಯಶ್ರೀಗೆ ಇದುವರೆಗೂ ಗೊತ್ತಿರಲಿಲ್ಲ. ವಯಸ್ಸು ಮೂವತ್ತೆರಡಾದರೂ ಮಹೇಶನಿಗೆ ಹೆಣ್ಣು ನಿಕ್ಕಿಯಾಗಿರಲಿಲ್ಲ. ಜಮೀನು ಕೆಲಸ, ಕೊಟ್ಟಿಗೆ ಚಾಕರಿ, ಆಳುಗಳಿಗೆ ಅಡುಗೆ, ವರುಷಕ್ಕೆರಡು ಶ್ರಾದ್ಧ, ಚೌಡಿ ದೇವಕಾರ್ಯ, ನವರಾತ್ರಿಯಲ್ಲಿ ಒಂಬತ್ತು ರಾತ್ರಿ ಸಂತರ್ಪಣೆ, ಮತ್ತೆ ವಾರ್ಷಿಕ ಸತ್ಯ ಗಣಪತಿ ಕಥೆ ಹೀಗೆ ಹಲಹದ್ನೆಂಟು ಕಾರ್ಯಕಟ್ಲೆ ನಡೆಯುವ ಹಳ್ಳಿಮನೆಗೆ ಸೊಸೆಯಾಗಿ ಬರಲು ಯಾವ ಹೆಣ್ಮಕ್ಳು ಬಯಸುತ್ತಾರೆ ಈಗಿನ ಕಾಲದಲ್ಲಿ? ರಾಹುಕೇತುವಿನ ಹಾಗೆ ಅತ್ತೆ-ಮಾವ ಗಟ್ಟಿಯಿದ್ದು ಸುತ್ತ ಸುತ್ತುತ್ತಿದ್ದರೆ ಜೋರಾಗಿ ಉಸಿರು ಬಿಡಲಿಕ್ಕಾದ್ರೂ ಆಗ್ತದಾ? ನಮ್ಮ ಬಣ್ಣ ನಾವು ತೊಟ್ಟುಕೊಳ್ಳಲೂ ಅವರ ಅಪ್ಪಣೆ ಪಡೆಯಬೇಕಾದ್ರೆ, ಮೊಬೈಲಿಗೆ ಒಂದು ಕಾಲ್ ಬಂದ್ರೂ ಯಾರು ಎತ್ತ ಅಂತ ಅವರಿಗೆ ವಿವರಣೆ ಕೊಡಬೇಕಾದ್ರೆ, ಅಂತ ಕಡೆ ಈಗಿನ ಹೆಣ್ಮಕ್ಳು ಉಳಿಯುವುದು ಹೌದ?

ಹಾಗಂತ ಮಹೇಶನ ತಂದೆ ಲಕ್ಷ್ಮೀನಾರಾಯಣನಿಗೂ